ಏರಿ ಆಸೀನರಾಗಿದ್ದರು! ಗೌರಿ ತನ್ನ ಪುಟ್ಟ ಮರಿಯ ಜೊತೆ ಕಾಡಿನ ಇನ್ನಾವುದೋ ಜಿಂಕೆಯ ಮರಿ ತಂದು ಮನೆ ಪ್ರವೇಶಿಸಿದ್ದಳು. ದೋಸೆ ಬಟ್ಟಲು ಹುಡುಕುತ್ತ ಅಡುಗೆ ಮನೆಗೆ ಗೌರಿ ನುಗ್ಗಿದರೆ ಕಾಡು ಸುತ್ತಾಡಿ ಸುಸ್ತಾದ ಪುಟಾಣಿ ಮರಿಗಳು ಆರಾಮ ಸೋಫಾದಲ್ಲಿ ಮಲಗಿದ್ದವು. ಇದೆಲ್ಲ ಹೇಗೆ ಸಾಧ್ಯವಾಯ್ತು? ಗೌರಿಯನ್ನು ತಲೆಮೇಲೆ ಕೂಡ್ರಿಸಿಕೊಂಡಿದ್ದರಿಂದ ಹೀಗಾಯ್ತೆಂದು ನಮಗೆ ನಾವೇ ಬೈಯ್ದುಕೊಂಡೆವು.

ನೆಂಟರು ಬಂದರೆ ಸಿಹಿ ತಿಂಡಿ ಮಾಡುತ್ತಾರೆಂಬ ಅರಿವು ಬಾಲ್ಯದಿಂದ ಬಂದಿತ್ತು. ಪ್ರತಿ ತಿಂಗಳೂ ನಡೆಯುವ ಸಂಕಷ್ಟ ಚೌತಿಯ ಪೂಜೆಗೆ ಜಾಗಟೆ ಬಾರಿಸಿ ಪ್ರಸಾದ ಸ್ವೀಕರಿಸಿ ನಾವು ತಿರುಗಿದರೆ ಕಟ್ಟೆಯಲ್ಲಿ ಎರಡು ಕಾಲಿಟ್ಟು ಕಿಟಕಿಯಲ್ಲಿ ಮೂತಿತೂರಿಸಿ ನಿಲ್ಲುವವಳು ಗೌರಿ!

ಗೌರಿಗೂ ನಮಗೂ ದಿನಚರಿ ಜ್ಞಾನ ದಶಕಗಳಿಂದ ಹಬ್ಬಿ ಬೆಳೆಯಿತು. ಮರಿ ಹಾಕಿದ ಹೊಸತರಲ್ಲಿ ಒಂದು ದಿನ ಮಾತ್ರ ಅಂಗಳಕ್ಕೆ ಬರುತ್ತಿರಲಿಲ್ಲ, ಗೌರಿ ಅಂಗಳಕ್ಕೆ ಗೈರಾದಳೆಂದರೆ ಮರಿ ಹಾಕಿದ್ದಾಳೆಂದು ತೀರ್ಮಾನಿಸುತ್ತಿದ್ದೆವು. ಕಾಡಿನ ಘಟನೆಗಳಿಗೆ ಗೌರಿ ಸ್ಪಂದಿಸುವ ರೀತಿಗಳನ್ನು ಸೂಕ್ಷ್ಮವಾಗಿ ಗಮನಿಸುವಾಗ ಪರಿಸರ ಪಾಠ ಸಿಗುತ್ತಿತ್ತು. ಬೀದಿ ನಾಯಿಗಳ ಓಡಾಟ, ಹಾವು, ಮಂಗ, ಚಿರತೆಗಳ ಆಗಮನವೆಲ್ಲ ಗೌರಿಯ ಬಾಲ, ಕಿವಿ, ಕಣ್ಣೋಟ, ಕಾಲ್ಬಡಿತದಲ್ಲಿ ಕಾಣಿಸುತ್ತಿತ್ತು. ನಮ್ಮೂರ ಹುಡುಗರು ಕಾಡಿನಲ್ಲಿ ಹುಲಿ ಕಂಡೆವೆಂದು ಹೇಳಿದ ರಾತ್ರಿ 15ಕ್ಕೂ ಹೆಚ್ಚು ಜಿಂಕೆಗಳನ್ನು ಸುರಕ್ಷಿತ ನೆಲೆಯೆಂದು ಅಂಗಳಕ್ಕೆ ಕರೆ ತಂದವಳು ಇವಳು.

ನೆನಪಾದರೆ ಕಣ್ಣು ಒದ್ದೆಯಾಗುತ್ತದೆ. ಗೌರಿ ನಮ್ಮವಳಲ್ಲ, ಯಾವತ್ತೂ ಕಾಡಿಗೆ ಸೇರಿದವಳು, ಇಲ್ಲಿ ಸಂರಕ್ಷಿತವಾಗಿ ಬೆಳೆದು ಕಟ್ಟಕಡೆಗೆ ತಲುಪಬೇಕಾದುದು ಕಾಡಿಗೆ. ಆಗಮನದ ಮೊದಲ ದಿನಗಳಲ್ಲಿಯೇ ಮನಸ್ಸು ಹಂಬಲಿಸುತ್ತಿತ್ತು. ನಮ್ಮ ನಿರೀಕ್ಷೆಗಳಿಗೆ ಒಪ್ಪಿ ಹೌದೇ ಹೌದೆಂದು ಕಾಡಿಗೆ ಹೋಗುವವಳು ಮರಳಿ ದಿನಕ್ಕೊಮ್ಮೆ ಬಂದು ನಿಲ್ಲುವ ನಿಯತ್ತು ಕಾಡಿನ ಎಲ್ಲೆಗಳನ್ನು ಮೀರಿದ ಹೃದಯ ಸಂಬಂಧಗಳನ್ನು ಜೋಡಿಸಿತು. ಮನೆ ಪಕ್ಕದಲ್ಲಿಯೇ ಕಾಡಿದೆ. ಅಲ್ಲಿನ ಉಪ್ಪಾಗೆ, ಸಂಪಿಗೆ ಮರದ ನೆರಳು, ನೀರಿನ ಟ್ಯಾಂಕು, ಮಾವಿನ ಮರ, ಬಗಿನೆ ಮರದ ಬುಡ, ಕಾಡು ಗಿಡದ ಹಿಂಡು, ಬಿಳಿ ನೇರಳ ಮರದಡಿಯಲ್ಲಿ ಸಂಚರಿಸುವುದು ಕಣ್ಣಿಗೆ ಕಟ್ಟಿದಂತಿದೆ. ಗೊಂಬಳೆ ಮರದ ಕಾಯಿಗಳು ನೆಲಕ್ಕೆ ಬಿದ್ದರೆ ಪರಿವಾರದ ಜೊತೆ ಹುಡುಕಿ ಮೆಲ್ಲುವಳು. ಬೇಸಿಗೆಯ ಉರಿಯಲ್ಲಿ ದಾಸವಾಳ, ಮಸೆ ಸೊಪ್ಪು, ಹಾಡೆ ಬಳ್ಳಿ ಮುಂತಾಗಿ ಜೀವಕ್ಕೆ ತಂಪು ಕೊಡುವ ಹಸಿರು ಸೊಪ್ಪು ಹುಡುಕಿ ತಿನ್ನುವ ಇವಳಲ್ಲಿ ತಜ್ಞ ನಾಟಿ ವೈದ್ಯೆಯ ದರ್ಶನವಾಗುತ್ತಿತ್ತು. ಅಡವಿ ಆಹಾರದಲ್ಲಿ ಆರೋಗ್ಯದ ಅಚ್ಚರಿ ಕಾಣಿಸುತ್ತಿತ್ತು.

## ಅಮ್ಮ ಮಲಗಿದ್ದಾಳೆ !

ಅವತ್ತು 2017ರ ಆಗಸ್ಟ್ 1 ನೇ ತಾರೀಕು, ಅಣ್ಣ ಶ್ರೀಧರ ಯಾರದೋ ಫೋನ್ ಬಂತೆಂದು ಕಾಡಿನ ದಿಬ್ಬವೇರಿದ್ದರು. ಮಾತಾಡುತ್ತ ರಾಮಪತ್ರೆ ಮರದ ಬುಡದಲ್ಲಿ ಮಲಗಿದ ಗೌರಿ ಕಂಡಳು. ಅವಳೀಗ ಎದ್ದು ಸರಸರ ಹತ್ತಿರ ಬರಬೇಕು, ಮೈ ನೆಕ್ಕಬೇಕು, ಆಮೇಲೆ ಅವಳ ಅಕ್ಕರೆಯ ತಿಂಡಿ ನೀಡಬೇಕು. ಇದು ಒಂದಲ್ಲ ಎರಡಲ್ಲ, ಹದಿನೈದು ವರ್ಷಗಳಿಂದ ಜರುಗುತ್ತಿದ್ದ ಘಟನೆ. ಗೌರಿ ತಲೆ ಎತ್ತಲಿಲ್ಲ, ಗೌರಿ, ಗೌರಿ ಎಂದು ಕೂಗಿ ಕರೆದರೂ ಮಲಗಿದವಳು ಮೇಲೇಳಲಿಲ್ಲ. ಹತ್ತಿರ ಹೋಗಿ ನೋಡಿದರೆ ಚಿರನಿದ್ದೆಗೆ ಜಾರಿದ್ದಳು. ಯಾರೂ ನಂಬಲಾಗದ ದುರಂತ ಘಟಿಸಿತ್ತು. 'ಅಮ್ಮ ಮಲಗಿದ್ದಾಳೆ, ಸುಮ್ಮನಿರಿ' ಎಂಬಂತೆ ಮಕ್ಕಳು, ಮರಿಮಕ್ಕಳ ದಂಡು ಅಲ್ಲಿಯೇ ಸುತ್ತಾಡುತ್ತಿದ್ದವು. ಗೌರಿ ಇನ್ನಿಲ್ಲ ಎನ್ನುವ ಮಾತು ಊರೆಲ್ಲ ಹಬ್ಬಿತು. ಊರಿನ ಸೆಲೆಬ್ರಿಟಿಯ ಸಾವು ಎಲ್ಲರಿಗೂ ಸಂಕಟ ಮೂಡಿಸಿತು. ನೂರಾರು ಜನ ಸೇರಿದರು, ಅರಣ್ಯಾಧಿಕಾರಿಗಳು ಬಂದರು, ಪಶುವೈದ್ಯರು ಸಾವಿನ ಕಾರಣಗಳ ಹುಡುಕಾಟ ಆರಂಭಿಸಿದರು. ನಾಗರ ಹಾವಿನ ಕಡಿತ ಖಾತ್ರಿಯಾಯ್ತು.

ಕಾನು ಗೌರಿಯದು, ಅವಳು ಇಲ್ಲಿಯೇ ಲೀನವಾಗಬೇಕು ಮನಸ್ಸು ಹೇಳುತ್ತಿತ್ತು. ಇಲ್ಲಿಯೇ ಅಂತ್ಯಕ್ರಿಯೆ ಮಾಡೋಣವೆಂದು ತಯಾರಿ ಶುರುವಾಯ್ತು. ಎಲ್ಲರ ಬಾಯಲ್ಲೂ ಗೌರಿಯ ಗುಣಗಾನ, ಗೌರಿಯಿಲ್ಲದ ಕಾಡು ಶೋಕ ಸಾಗರ, ನಾಡಿನ ಜನರ ಗೌರವ ನಮನ. ಎಷ್ಟೆಂದರೂ ಮನೆ ಮಗಳ ಸಾವಲ್ಲವೇ? ಮುದ್ದು ಮುದ್ದಾದ ದೇಹ ಎತ್ತಿ ಅಣ್ಣ ಶ್ರೀಧರ ಶವ ಸಂಸ್ಕಾರದ ನೆಲೆಗೆ ಸಾಗಿದರು. ಗೌರಮ್ಮನನ್ನು ಕಟ್ಟಿಗೆಯಲ್ಲಿ ಮಲಗಿಸಿದೆವು. ಒಂದು ಅಚ್ಚ ಬಿಳುಪಿನ ರೇಷ್ಮೆ ಶಾಲು ದೇಹಕ್ಕೆ ಹೊದೆಸಿದ್ದಾಯ್ತು. ನಾನು ದೇಹಕ್ಕೆ ಅಗ್ನಿ ಸ್ಪರ್ಶ ಮಾಡುವ ಹೊತ್ತು ನಮ್ಮ ನಡುವಿನ ಸಂಬಂಧ ಎಂಥದು ಗೌರಿ? ನೂರೊಂದು ಪ್ರಶ್ನೆಗಳೆದ್ದವು. ದೇಹ ಉರಿದು ಬೂದಿಯಾಯ್ತು.

ಗೌರಿಯ ಅಂತ್ಯಕ್ರಿಯೆ ನಡೆದ ನೆಲೆಯಿಂದ ಮನೆಯತ್ತ ಹೊರಡಲು ಹೆಜ್ಜೆಗಳು ಭಾರವಾದವು. ಮರುದಿನ ಬೆಳಿಗ್ಗೆ ದೋಸೆ ತಿನ್ನಲು ಗೌರಿಯಿಲ್ಲ, ಸಂಕಷ್ಟಿಯ ಪೂಜೆಗೆ ಗೌರಿ ಇನ್ನೆಂದೂ ಬರುವುದಿಲ್ಲ. ಆದರೆ ಅವಳ ಮಕ್ಕಳು, ಮರಿ ಮಕ್ಕಳು ಇವೆಯಲ್ಲ ಎಂಬ ಸಮಾಧಾನ. ಮರುದಿನ ಬೆಳಿಗ್ಗೆ ಗೌರಿ ಸುಟ್ಟ ಜಾಗಕ್ಕೆ ಹೆಜ್ಜೆ ಹಾಕಿದರೆ ಬೇಲಿಯಾಚೆಗೆ ಸಾಲು ಹಿಡಿದು ಮಲಗಿದ ಆರೆಂಟು ಜಿಂಕೆಗಳು ಅಮ್ಮ ಗೌರಿಯ ಹೆಣದ ಹೊಗೆ ನೋಡುತ್ತ ಮಲಗಿದ್ದವು, ಕಣ್ಣು ಮಂಜಾಯಿತು. ಎದ್ದು ನಿಂತು ಎಲ್ಲವೂ ಕಿವಿ ಅಗಲಿಸಿ ಎಂದಿಲ್ಲದ ಭಯದಲ್ಲಿ ನೋಡಿದವು. ಗೌರಮ್ಮನ ಸಾವು ನಮ್ಮ ನಡುವಿನ ಕಾಡು ಸಂಕುಲದ ಮಾತು ಮುಗಿಸಿದಂತೆ ಕಾಣಿಸಿತು.

## ಸಾವಿನ ಸತ್ಯ ಹೇಗೆ ಹೇಳೋಣ?

ಗೌರಿ ಕಟ್ಟಿ ಬೆಳೆಸಿದ ಸಂಬಂಧಗಳನ್ನು ವಿವರಿಸಲು ಪದಗಳಿಲ್ಲ. ನಾವು ಓಡುವ ರಭಸದಲ್ಲಿದ್ದಾಗ ರಸ್ತೆಗೆ ಅಡ್ಡಾಗಿದ್ದ ಕಣ್ಣಿಗೆ ಕಾಣದ ಜೇಡದ ದಾರ ತುಂಡಾದರೆ ಸ್ವಲ್ಪವೂ ತಿಳಿಯುವುದಿಲ್ಲ. ಆದರೆ ಒಡಲ ನೂಲಿನಲ್ಲಿ ಗೂಡು ಹೆಣೆದ ಸೂಕ್ಷ್ಮ ಜೇಡಕ್ಕೆ ಅದು ಅರ್ಥವಾಗುತ್ತದೆ. ಬೆಸೆದ ಸಂಬಂಧ ವಿವರಿಸಲು ಭಾಷೆಗೆ ಸಾಧ್ಯವಿಲ್ಲ. ಸಾವು ಸಹಜವಾದರೂ ಕಾಡು ಗರ್ಭದಿಂದ ಎಳೆತಂದ ನವಿರು ದಾರವನ್ನು ಅರೆಕ್ಷಣ ಕತ್ತರಿಸಿದ ಅವ್ಯಕ್ತ ಆಘಾತ ಕಾಡುತ್ತಿದೆ. ಗೌರಿಯ ಮಕ್ಕಳೆಲ್ಲ ಆಗಾಗ ಮನೆ ಸನಿಹ ಬರುತ್ತವೆ, ಬೇಲಿಯಂಚಿನಲ್ಲಿ ನಿಲ್ಲುತ್ತವೆ. ಆದರೆ ದೋಸೆ ಕೇಳುವುದಿಲ್ಲ, ಸಿಹಿ ಬೇಡುವುದಿಲ್ಲ. ಒಡನಾಟದ ಅಕ್ಕರೆಯಲ್ಲಿ ನೀಡಲು ಹೋದರೆ ಚಂಗನೆ ಜಿಗಿದು ಪರಿಚಯವೇ ಇಲ್ಲದಂತೆ ಪರಾರಿಯಾಗುತ್ತವೆ. ನಗುತ್ತ ಅಂಗಳದಲ್ಲಿ ನಲಿದು ದೊಡ್ಡಾದವು ಇಂದೇಕೆ ಹೀಗಾದವು? ಗೌರಿಯ ಹಿರಿ ಮಗಳು ಲಕ್ಷ್ಮಿಗೂ ನಮ್ಮ ಪರಿಚಯವಿಲ್ಲವೇ? ಸಂಬಂಧಗಳ ಸಾವು ಕಾಡುತ್ತಿದೆ.

17 ವರ್ಷ ಪರ್ಯಂತ ಜೊತೆಗಿದ್ದ ಗೌರಿ ನಮಗೆ ಎಷ್ಟೆಂದರೂ ಮನೆ ಮಗಳು. ಗೌರಿಯ ಮುದ್ದಾದ ದೇಹ ಹಿಡಿದೆತ್ತಿ ಕಟ್ಟಿಗೆ ರಾಶಿಯಲ್ಲಿ ಮಲಗಿಸಿ ಚಿತೆಗೆ ಅಗ್ನಿಸ್ಪರ್ಶ ಮಾಡಿದವರು ನಾವೆಂದು ಅವಳ ಬಳಗಕ್ಕೆಲ್ಲ ಗೊತ್ತಿದೆ, ಉರಿವ ಚಿತೆಯಿಂದ ದೂರ ನಿಂತಿದ್ದು ಅಮ್ಮನ ದಹನ ನೋಡಿದ ಪ್ರತ್ಯಕ್ಷ ಸಾಕ್ಷಿಗಳು ಗೌರಿ ಬಳಗದ ಆರೆಂಟು ಜಿಂಕೆಗಳು. ಅಮ್ಮನನ್ನು ಕೊಂದು ಸುಟ್ಟವರು ನಾವೆಂದು ಘಟನೆ ಅರ್ಥಮಾಡಿಕೊಂಡಿದ್ದರೆ!? ಮಗು ರಕ್ಷಿಸಿದ ಮುಂಗುಸಿಯ ಹಾಡು ನೆನಪಾಗುತ್ತಿದೆ. ಸತ್ಯ ತಿಳಿಸುವ ದಾರಿ ಯಾವುದು? ಅರ್ಥವಾಗುತ್ತಿಲ್ಲ.

## ಗೌರಿಯ ಹಿರಿಮೆ

ಗೌರಿ ಕಾಡಿನ ಜಿಂಕೆಯಾಗಿ ನಾಡಿನಾದ್ಯಂತ ಗಳಿಸಿದ ಪ್ರೀತಿ ದೊಡ್ಡದು. ಕಳವೆಗೆ ಬಂದ ಒಂಭತ್ತು ವರ್ಷಗಳ ನಂತರ ಕಾಡಿನ ಜಿಂಕೆಗಳ ಸ್ನೇಹ ಸಂಪಾದಿಸಿ 2011ರ ಡಿಸೆಂಬರ್ ೧೧ರಂದು ಮೊದಲ ಮರಿ ಜನಿಸಿದೆ. ಹಳ್ಳಿ ಕಾಡಿನ ಜೊತೆಗಿದ್ದು ಮರಿಗೆ ಜನ್ಮ ನೀಡಿದ ವಿಶೇಷ ದಾಖಲೆ ಗೌರಿಯದಾಗಿದೆ. ಜಿಂಕೆಗಳ ಕುರಿತಾಗಿರುವ ಜಾಗತಿಕ ಡೀರ್ ನ್ಯೂಸ್ ಪತ್ರಿಕೆ ಸುದ್ದಿ ಪ್ರಕಟಿಸಿದೆ. ಮೈಸೂರು ವಿಶ್ವವಿದ್ಯಾಲಯದ ಇಎಮ್‌ಆರ್‌ಸಿ ನಿರ್ಮಿಸಿದ ಕಾನ್ಮನೆ ನರ್ಚರಿಂಗ್ ನೇಚರ್ ಪರಿಸರ ಚಲನಚಿತ್ರದಲ್ಲಿ ಕಾಣಿಸಿಕೊಂಡಿದ್ದಾಳೆ. ಉಜಿರೆಯ ಎಸ್ ಡಿ ಎಮ್ ಸಿ ಕಾಲೇಜಿನ ಪತ್ರಿಕೋದ್ಯಮ ವಿದ್ಯಾರ್ಥಿಗಳು 17 ವರ್ಷಗಳ ಗೌರಿ ಬದುಕಿನ ಕುರಿತು ಕಾನನ ಸಿರಿ ಸಾಕ್ಷ್ಯಚಿತ್ರ ತಯಾರಿಸಿದ್ದಾರೆ. ಸಹಸ್ರಾರು ಮಕ್ಕಳು ಗೌರಿಯನ್ನು ನೋಡಿ ಖುಷಿ ಪಟ್ಟಿದ್ದಾರೆ. ಗೌರಿಯ ಬದುಕಿನ ಕುರಿತು ಕಾನ್ ಗೌರಿ, ಗೌರಿ ಜಿಂಕೆಯ ಆತ್ಮಕತೆ ಪುಸ್ತಕಗಳು ಪ್ರಕಟವಾಗಿವೆ. ಸ್ವಾಮಿಗಳು, ಚಲನಚಿತ್ರ ನಟರು, ಸಾಹಿತಿಗಳು ಸೇರಿದಂತೆ ಹಲವರು ಗೌರಿಯ ಅಭಿಮಾನಿಗಳು. ಸಾಮಾಜಿಕ ಜಾಲತಾಣಗಳಲ್ಲಿ ಗೌರಿ ಲಕ್ಷಾಂತರ ಜನರ ಮನ ಗೆದ್ದಿದ್ದಾಳೆ.